Karnatak Law Society's
**Vishwanathrao Deshpande Institute of Technology**
**(Approved by AICTE, New Delhi. Affiliated to VTU, Belagavi)**
**(Recognised Under Section 2(f) by UGC, New Delhi)**
**Udyog Vidya Nagar, Haliyal – 581329, Dist: Uttar Kannada (Karnataka)**
**Phone: 08284-220861, 220334, 221409, Fax: 08284-220813**
**www.klsvdit.edu.in principal@klsvdit.edu.in**

Date: 15-10-2022

**ಪತ್ರಿಕಾ ಪ್ರಕಟಣೆ:**

# ಆವಿಷ್ಕಾರ ಉಪಕ್ರಮ ಉಪನ್ಯಾಸ ಕಾರ್ಯಕ್ರಮ ಯಶಸ್ವಿ

ಕೆ. ಎಲ್. ಎಸ್. ವಿ. ಡಿ. ಐ. ಟಿ. ಹಳಿಯಾಳದಲ್ಲಿ ಮಾಜಿ ರಾಷ್ಟ್ರಪತಿ ಹಾಗೂ ಖ್ಯಾತ ಬಾಹ್ಯಾಕಾಶ ವಿಜ್ಞಾನಿಯಾದ ದಿ. ಡಾ. ಎ. ಪಿ. ಜೆ. ಅಬ್ದುಲ್ ಕಲಾಂ ಅವರ ಜನ್ಮದಿನದ ಪ್ರಯುಕ್ತ ರಾಷ್ಟ್ರೀಯ ಆವಿಷ್ಕಾರ ದಿನವನ್ನು ಅಕ್ಟೋಬರ್ 15ರಂದು ಆಚರಿಸಲಾಯಿತು. ಆವಿಷ್ಕಾರ ದಿನದ ಅಂಗವಾಗಿ "ಆವಿಷ್ಕಾರ ಉಪಕ್ರಮ" ಎಂಬ ಉಪನ್ಯಾಸ ಕಾರ್ಯಕ್ರಮವನ್ನು ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗದ ಮುಖ್ಯಸ್ಥರು ಹಾಗೂ ಆವಿಷ್ಕಾರ ಪರಿಷತ್ತಿನ ಅಧ್ಯಕ್ಷರಾದ ಡಾ. ಮಹೇಂದ್ರ ದೀಕ್ಷಿತ್ ಅವರು ನಡೆಸಿಕೊಟ್ಟರು. ಆವಿಷ್ಕಾರ ಎಂದರೇನು? ನೂತನ ಆವಿಷ್ಕಾರ ಪ್ರಾರಂಭಿಸುವ ಬಗೆ, ಆವಿಷ್ಕಾರದ ಹಂತದಲ್ಲಿ ಎದುರಾಗುವ ಸಮಸ್ಯೆಗಳ ಬಗ್ಗೆ ಸ್ಪಷ್ಟ ಚಿತ್ರಣ ನೀಡಿದರು. ಆವಿಷ್ಕರಿಸುವ ಮನೋಭಾವವಿದ್ದರೆ ಸ್ಥಳೀಯವಾಗಿ ಲಭ್ಯವಿರುವ ವಸ್ತುಗಳಿಂದಲೇ ನೂತನ ಆವಿಷ್ಕಾರಗಳನ್ನು ಮಾಡಬಹುದೆಂದು ದೃಶ್ಯ ಮಾಧ್ಯಮದ ಮೂಲಕ ಸಾದರಪಡಿಸಿದರು. ಯೋಜನಾ ಕಾರ್ಯಗಳ ಮಾರ್ಗದರ್ಶಿ, ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಯೋಜನಾ ಕಾರ್ಯಗಳನ್ನು ಮಂಡಿಸುವ ಪರಿಯನ್ನು ವಿವರಿಸಿದರು. ಪ್ರಾಚಾರ್ಯರಾದ ಡಾ. ವಿ. ಎ. ಕುಲಕರ್ಣಿ ಅವರು ವಿದ್ಯಾರ್ಥಿಗಳು ತಮ್ಮ ಯೋಜನಾ ಕಾರ್ಯದಲ್ಲಿ ಸಮಾಜ ಉಪಯೋಗಿ ಆವಿಷ್ಕಾರವನ್ನು ಮಾಡಬೇಕೆಂದು ಕರೆನೀಡಿದರು. ಕೇಂದ್ರ ಸರಕಾರದ ಮಾನವ ಸಂಪನ್ಮೂಲ ಇಲಾಖೆಯ ; ಸಂಸ್ಥೆಗಳ ನಾವಿನ್ಯತಾ ಮಂಡಳಿ, ದೆಹಲಿ ಅಡಿಯಲ್ಲಿ ಈ ಕಾರ್ಯಕ್ರಮವನ್ನು ನಡೆಸಲಾಯಿತು. 150ಕ್ಕೂ ಅಧಿಕ ವಿದ್ಯಾರ್ಥಿಗಳು ಈ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಪ್ರಾಂಶುಪಾಲರು

**Principal**
**KLS Vishwanathrao Deshpande Institute of Technology, Haliyal**


KLS VDIT, HALIYAL
INSTITUTION'S INNOVATION COUNCIL
Presents
"CELEBRATION OF NATIONAL INNOVATION DAY"
15th October 2022
A Talk On
From Mind to Practice
INSTITUTION'S
INNOVATION
COUNCIL
GPS Map Camera


KLS VDIT, HALIYAL
INSTITUTION'S INNOVATION COUNCIL
Presents
"CELEBRATION OF NATIONAL INNOVATION DAY"
15th October 2022
A Talk On
"INNOVATIVE INITIATIVES"
From Mind to Practice
PROFESSOR,
INSTITUTION'S
INNOVATION
COUNCIL
www.klsvdit.edu.in